# ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಸ್ಪೆಷಲ್ ಕೇಸ್ (ಎಸ್.ಸಿ./ಎಸ್.ಟಿ.) ನಂ. 08/2021

ಪ್ರ.ವ.ಬೋ. ದಿನಾಂಕ -14.09.2022

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | - | ನಾಗಮ್ಮ | ಫಿರ್ಯಾ.ಸಾ. | - | 03 |
| ಗಂಡನ ಹೆಸರು | - | ಹನುಮಂತಪ್ಪ | ಚಾ.ಸಾ. | - | 01 |
| ವಯಸ್ಸು | - | 33 ವರ್ಷ | | | |
| ಉದ್ಯೋಗ | - | ವ್ಯವಸಾಯ | | | |
| ವಾಸ ಸ್ಥಳ | - | ಕಣಿವೆ ಜೋಗಿಹಳ್ಳಿ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**- ಮುಖ್ಯ ವಿಚಾರಣೆ - ವಿಶೇಷ ಸರ್ಕಾರಿ ಅಭಿಯೋಜಕರಿಂದ -**

1. ನ್ಯಾಯಾಲಯದ ಮುಂದಿರುವ ಆರೋಪಿಗಳು ಗೊತ್ತು . ಈಗ್ಗೆ 3 ವರ್ಷದ ಹಿಂದೆ ಅಗಸ್ಟ್ 1 ನೇ ತಾರೀಖಿನಂದು ನಾನು ನಮ್ಮ ಮಾವನ ಜಮೀನಿನಲ್ಲಿ ಇದ್ದೆ . ಜಮೀನಿನಲ್ಲಿ ನಾನು ನನ್ನ ಮಾವ ಕರಿಯಪ್ಪ , ನನ್ನ ಗಂಡ ಹನುಮಂತಪ್ಪ , ನನ್ನ ಮಕ್ಕಳಾದ ತೇಜಸ್ವಿನಿ , ಚೇತನ್ ಕುಮಾರ್ ಇದ್ದೇವು . ತಿಮ್ಮಜ್ಜ , ಚಿತ್ತಪ್ಪ , ಕೆಂಚಪ್ಪ , ತಿಮ್ಮಜ್ಜ , ಬೊಮ್ಮಪ್ಪ , ಅಂಗಡಿ ಚಿತ್ತಪ್ಪ , ಸುರೇಶ ಹಾಗೂ ಇತರರು ಅಲ್ಲಿಗೆ ಕುರಿ ಬಿಟ್ಟುಕೊಂಡು ಬಂದರು . ನಮ್ಮ ಜಮೀನಿನಲ್ಲಿ ಅಡಿಕೆ ಗಿಡಗಳು ಮತ್ತು ಮೆಕ್ಕೆ ಜೋಳ ಇತ್ತು . ಮೆಕ್ಕೆ ಜೋಳ ಮೇಯಿಸಿ , ಅಡಿಕೆ ಗಿಡಗಳನ್ನು ಕಿತ್ತು , ಗುಡಿಸಲಿಗೆ ಬೆಂಕಿ ಇಟ್ಟರು . ಆಗ ಬೆಳಗ್ಗೆ 11.00 ಗಂಟೆಯಾಗಿತ್ತು . ಗುಂಪಾಗಿ ಹೊಲಕ್ಕೆ ನುಗ್ಗಿ ನಮಗೆ ಹೊಡೆದರು . ನಾವು ಹೊಡೆಯಬೇಡಿ ಎಂದು ಹೇಳಿದಾಗ ಕೀಳುಜಾತಿಯವರು , ವಡ್ಡಜಾತಿ ಯವರು ಎಂದು ಹಾದ್ರಿಗಿತ್ತಿ, ಬೋಸೂಡಿ ಎಂದು ಕೆಟ್ಟ ಮಾತುಗಳಿಂದ ಬೈದರು . ನನ್ನ ಗಂಡನಿಗೆ ಹೊಡೆದರು ನಾನು ಬಿಡಿಸಿಕೊಳ್ಳಲು ಹೋದಾಗ ನನ್ನ ಸೀರೆಯನ್ನು ಎಳೆದಾಡಿದರು . ನನ್ನ ಮಾವನಿಗೆ ಕೈನಿಂದ

ಹೊಡೆದರು . ನನ್ನ ಗಂಡನಿಗೆ ಕೋಲಿನಿಂದ ಹೊಡೆದರು . ಅವರುಗಳ ಕೈಯಲ್ಲಿ ಕೊಡಲಿ , ಮಚ್ಚು , ಕೋಲು ಇತ್ತು . ಜಮೀನಿನಲ್ಲಿ ಇದ್ದ ಗುಡಿಸಲಿಗೆ ಬೆಂಕಿ ಇಟ್ಟರು. ಅದರಿಂದ ಗುಡಿಸಿಲಿನ ಒಳಗಡೆ ಇದ್ದ ಎಲ್ಲಾವು ಸುಟ್ಟು ಹೋಯಿತು . ಅಡಿಕೆ ಗಿಡ ಮತ್ತು ಮೆಕ್ಕೆ ಜೋಳಕ್ಕೂ ಬೆಂಕಿ ಇಟ್ಟರುಬ . ಪೈಪ್ , ಕೇಬಲ್ ಸ್ಟಾರ್ಟರ್ ಎಲ್ಲಕ್ಕೂ ಬೆಂಕಿ ಇಟ್ಟು ಸುಟ್ಟರು . ನಾವು ತಪ್ಪಿಸಿಕೊಂಡು ಕಸವನಹಳ್ಳಿಗೆ ಬಂದೇವು . ಪುನಃ ಕಣಿವೆಜೋಗಿಹಳ್ಳಿಯ ಪರಮೇಶನ ಮನೆ ಹತ್ತಿರ ಬಂದು ಗಲಾಟೆ ಮಾಡಿದರು . ಬೀರು ಕುಟ್ಟಿ , ಟಿ ವಿ ಹೊಡೆದು ಹಾಕಿ ಹಣ ತೆಗೆದುಕೊಂಡು ಹೋದರು . ಸದರಿ ಘಟನೆಯಿಂದ ನನಗೆ , ನನ್ನ ಗಂಡ ಮತ್ತು ಮಕ್ಕಳಿಗೆ ಪೆಟ್ಟಾಗಿದ್ದು ಚಿತ್ರದುರ್ಗ ಆಸ್ಪತ್ರೆಗೆ ಹೋದೆವು . ನಾನು ಪೋಲೀಸರಿಗೆ ದೂರು ನೀಡಿದೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ -8 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ -8(ಎ) ಎಂದು ಗುರುತಿಸಲಾಗಿದೆ. ನನಗೆ ಹಲ್ಲೆ ಮಾಡಿದ ವ್ಯಕ್ತಿಗಳೆಲ್ಲರೂ ಈ ದಿನ ನ್ಯಾಯಾಲಯದಲ್ಲಿ ಇರುವ ಆರೋಪಿಗಳು ಆಗಿರುತ್ತಾರೆ . ನಂತರ ಪೋಲೀಸರು ಜಮೀನಿನಲ್ಲಿ ಮಹಜರ್ ಮಾಡಿದರು . ಆಗ ರಾತ್ರಿ 8 ಗಂಟೆಯಾಗಿತ್ತು . ಪೋಲೀಸರಿಗೆ ನಾನು ಘಟನಾ ಸ್ಥಳ ತೋರಿಸಿದೆ . ಸಾಕ್ಷಿ ನಿಪಿ1 ನ್ನು ನೋಡಿ ಸದರಿ ಪಂಚನಾಮೆ ಎಂದು ಗುರುತಿಸಿದ್ದು ಅದರಲ್ಲಿನ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ -1(ಸಿ) ಎಂದು ಗುರುತಿಸಲಾಗಿದೆ. 3 ತಟ್ಟೆ , 3 ಲೋಟ , ಪಾತ್ರೆ ಸಾಮಾನು , ಪ್ಯಾನ್ , ಕೋಲು , ಮಚ್ಚು , ಕೊಡಲಿ , ಕಟ್ಟಿಗೆ ,ಚಮಚ , ಅಡಿಕೆ ಗಿಡ , Sprinkler ಪೈಪ್ ತೆಗೆದುಕೊಂಡರು . ಅವುಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿ ಮು.ಮಾ.- 1 ರಿಂದ 12 ನ್ನು ನೋಡಿ ವಶಪಡಿಸಿಕೊಂಡ ವಸ್ತುಗಳು ಎಂದು ಗುರುತಿಸಿರುತ್ತಾರೆ . ಮಹಜರ್ ನ್ನು ವಿಡಿಯೋ

ಮಾಡಿದರು . ಸಾಕ್ಷಿಯು ನಿಪಿ –2 ರಿಂದ 7 ನ್ನು ನೋಡಿ ಆ ಸಂದರ್ಭದಲ್ಲಿ ತೆಗೆದ ಫೋಟೋಗಳು ಎಂದು ಗುರುತಿಸಿರುತ್ತಾರೆ .

ನಂತರ ನನ್ನನ್ನು ಪೋಲೀಸರು ಚಿತ್ರಹಳ್ಳಿಗೆ ಕಳುಹಿಸಿದ್ದರು . ನಾವು ಮೊದಲು ಆಸ್ಪತ್ರೆಗೆ ಹೋಗಿದ್ದು , ಅಲ್ಲಿಂದ ವೈದ್ಯರನ್ನು ಕೇಳಿ ಠಾಣೆಗೆ ಹೋಗಿ ದೂರು ನೀಡಿ , ಜಮೀನಿಗೆ ಹೋಗಿ ಪುನಃ ಆಸ್ಪತ್ರೆಗೆ ಹೋದೆವು . ಆರೋಪಿಗಳು ನನ್ನ ಮೈದುನ ಪರಮೇಶನ ಮನೆಯಿಂದ ಹಣ ತೆಗೆದುಕೊಂಡು ಹೋದರು . ಘಟನೆ ನಡೆದ ಒಂದು ವಾರದ ನಂತರ ಪೋಲೀಸರು ನನ್ನನ್ನು ಮತ್ತೆ ವಿಚಾರಣೆ ಮಾಡಿದರು , ಪೋಲೀಸರಿಗೆ ನಾನು ಹೇಳಿಕೆನೀಡಿದ್ದೇನೆ . ನಾವು ಬೋವಿ ಜಾತಿಗೆ ಸೇರಿದವರು . ಆರೋಪಿಗಳು ಗೊಲ್ಲರ ಜಾತಿಗೆ ಸೇರಿದವರು .

**(ಪಾಟೀ ಸವಾಲು ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ರೂ 500/– ರ ಖರ್ಚಿನೊಂದಿಗೆ ಮುಂದುಡಲಾಗಿದೆ. )**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ

**ನ್ಯಾಯಾಧೀಶರು, ಚಿತ್ರದುರ್ಗ.**

## ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

### ಸ್ಪೆಷಲ್ ಕೇಸ್ (ಎಸ್.ಸಿ./ಎಸ್.ಟಿ.) ನಂ. 08/2021

ಪ್ರ.ವ.ಬೋ. ದಿನಾಂಕ -14.09.2022

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | - | ಶ್ರೀನಿವಾಸ | ಫ್ರಾ.ಸಾ. | - | 04 |
| ತಂದೆಯ ಹೆಸರು | - | ತಿಮ್ಮಯ್ಯ | ಚಾ.ಸಾ. | - | 04 |
| ವಯಸ್ಸು | - | 26 ವರ್ಷ | | | |
| ಉದ್ಯೋಗ | - | ವಿದ್ಯಾರ್ಥಿ | | | |
| ವಾಸ ಸ್ಥಳ | - | ಕಣಿವೆ ಜೋಗಿಹಳ್ಳಿ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**- ಮುಖ್ಯ ವಿಚಾರಣೆ - ವಿಶೇಷ ಸರ್ಕಾರಿ ಅಭಿಯೋಜಕರಿಂದ -**

1. ಚಾಸಾ 11 ನನ್ನ ತಾತ . ಚಾಸಾ 01 ಗೊತ್ತು . ಚಾಸಾ 11 ರವರ ಜಮೀನಿನ ಸರ್ವೇ ನಂ. 51 .

2. ದಿಃ 01.08.2020 ರಂದು ನಾನು , ಚಾಸಾ 7, 1, 11 , 5 , 14 , 12, 13 ಜಮೀನಿನಲ್ಲಿ ಇದ್ದೇವು . ನಮ್ಮ ಊರಿನ ಗೊಲ್ಲ ಜನಾಂಗದವರು ನಮ್ಮ ಜಮೀನಿಗೆ ಕುರಿಗಳನ್ನು ಹೊಡೆದುಕೊಂಡು ಬಂದರು . ಸಣ್ಣಜ್ಜರ ತಿಮ್ಮಪ್ಪ , ಚಂದ್ರಪ್ಪ , ಬೊಮ್ಮಣ್ಣ , ತಿಮ್ಮಪ್ಪ , ಶಿವಣ್ಣ , ಶ್ರೀನಿವಾಸ, ಮೂಡಲಗಿರಿ, ಸುರೇಶ , ನಾಗೇಂದ್ರಪ್ಪ , ಚಿತ್ತಪ್ಪ , ಚಿತ್ತಪ್ಪ , ಪ್ರಶಾಂತ , ಕೆಂಚಪ್ಪ ಇದ್ದರು . ಸುಮಾರು 30-40 ಜನ ಇದ್ದರು . ನಾವು ಅವರುಗಳನ್ನು ಕುರಿ ಏಕೆ ಬಿಡುತ್ತೀರಿ ಎಂದು ಅಡ್ಡಗಟ್ಟಿದ್ದಾಗ ಅವರು ನಮಗೆ ಹೊಡೆಯಲು ಬಂದರು . ಜಮೀನಿನಲ್ಲಿ ಇದ್ದ ಅಡಿಕೆ ಗಿಡಗಳನ್ನು ಕಿತ್ತು ಹಾಕಿ ಮೆಕ್ಕೆ ಜೋಳಗಳನ್ನು ಮೇಂಯಿಸಿದ್ದರು . ಅವರುಗಳು ದೊಣ್ಣೆಗಳು , ಮಚ್ಚುಗಳು , ಕೊಡಲಿಗಳು , ಕಲ್ಲುಗಳು ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಬಂದು ಚಾಸಾ 01, 10 , 11, 7 , 12 ರವರಿಗೆ ಹೊಡೆದರು . ವಾಸ ಮಾಡುತ್ತಿದ್ದ ಗುಡಿಸಲಿಗೆಬೆಂಕಿ ಇಟ್ಟು ಮೋಟರ್ ಗೆ ಕಲ್ಲು ಹಾಕಿ, ಅಡಿಕೆ ಗಿಡಗಳನ್ನು ಸುಟ್ಟು ಹಾಕಿದರು . ವಡ್ಡಸೂಳೇ ಮಕ್ಕಳಾ ನೀವು ಕೀಳು ಜನಾಂಗದವರು ಎಂದು ಬೈದರು . ನವು ಓಡಿ ಹೋದೆವು . ಮತ್ತೆ ಮನೆಯ ಹತ್ತಿರ ಬಂದು ಬಾಗಿಲು ಶೀಟ್ ಹೊಡೆದು ಹಾಕಿ

ಹಣ ತೆಗೆದುಕೊಂಡು ಹೋದರು . ಜಮೀನಿನ ವಿಚಾರದಲ್ಲಿ ಗಲಾಟೆ ಇದ್ದು , ಆ ಕಾರಣದಿಂದ ಮೇಲೆ ಹೇಳಿದಂತೆ ಆರೋಪಿಗಳು ಕೃತ್ಯ ಎಸಗಿರುತ್ತಾರೆ . ನಮಗೂ ಹೊಡೆಯಲು ಬಂದರು . ಪೋಲೀಸರು ಘಟನೆ ಬಗ್ಗೆ ನನ್ನನ್ನು ವಿಚಾರಣೆ ಮಾಡಿದ್ದಾರೆ . ಆ ದಿನ ಗಲಾಟೆ ಮಾಡಿದ ವ್ಯಕ್ತಿಗಳು ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಗಳು ಆಗಿರುತ್ತಾರೆ . ಮೇಲೆ ಹೇಳಿದ ಘಟನೆ ನಡೆದಾಗ ನನ್ನ ಮೊಬೈಲ್ ನಲ್ಲಿ ವಿಡಿಯೋ ಮಾಡಿರುತ್ತೇನೆ . ಅದನ್ನು ಒಂದು ಪೆನ್ ಡ್ರೈವ್ ಗೆ ಹಾಕಿ ಡಿ.ವೈ.ಎಸ್.ಪಿ. ಕಚೇರಿಯಲ್ಲಿ ಡಿ.ವೈ.ಎಸ್.ಪಿ. ರವರಿಗೆ ನೀಡಿರುತ್ತೇನೆ . ಅದನ್ನು ಪೋಲೀಸರು ಮಹಜರ್ ಮಾಡಿ ತೆಗೆದುಕೊಂಡರು . ಮಹಜರ್ಗೆ ನಾನು ಸಹಿ ಮಾಡಿದ್ದೇನೆ . ಸಾಕ್ಷಿಯು ಮಹಜರ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ –9 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ –9(ಎ) ಎಂದು ಗುರುತಿಸಲಾಗಿದೆ. ಸಾಕ್ಷಿಯು ಪೆನ್ ಡ್ರೈವ್ ನ್ನು ನೋಡಿ ಗುರುತಿಸಿದ್ದು , ಅದನ್ನು ಮು.ಮಾ.– 13 ಎಂದು ಗುರುತಿಸಲಾಗಿದೆ. ಸಾಕ್ಷಿಯು 2 ಫೋಟೋ ಗಳನ್ನು ನೋಡಿ ಅ ಸಂದರ್ಭದಲ್ಲಿ ತೆಗೆದ ಫೋಟೋ ಎಂದು ಗುರುತಿಸಿದ್ದು ಅವುಗಳನ್ನು ನಿಪಿ –10 ಮತ್ತು 11 ಎಂದು ಗುರುತಿಸಲಾಗಿದೆ .

**(ಪಾಟೀ ಸವಾಲು ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ರೂ 500/– ರ ಖರ್ಚಿನೊಂದಿಗೆ ಮುಂದುಡಲಾಗಿದೆ. )**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ

**ನ್ಯಾಯಾಧೀಶರು, ಚಿತ್ರದುರ್ಗ.**

## ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

### ಸ್ಪೆಷಲ್ ಕೇಸ್ (ಎಸ್.ಸಿ./ಎಸ್.ಟಿ.) ನಂ. 08/2021

ಪ್ರ.ವ.ಬೋ. ದಿನಾಂಕ -14.09.2022

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | - | ಆನಂದ | ಪ್ರಾ.ಸಾ. | - | 05 |
| ತಂದೆಯ ಹೆಸರು | - | ಕರಿಯಪ್ಪ | ಚಾ.ಸಾ. | - | 05 |
| ವಯಸ್ಸು | - | 26 ವರ್ಷ | | | |
| ಉದ್ಯೋಗ | - | ವಿದ್ಯಾರ್ಥಿ | | | |
| ವಾಸ ಸ್ಥಳ | - | ಕಣಿವೆ ಜೋಗಿಹಳ್ಳಿ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**- ಮುಖ್ಯ ವಿಚಾರಣೆ - ವಿಶೇಷ ಸರ್ಕಾರಿ ಅಭಿಯೋಜಕರಿಂದ -**

1. ಸಾಕ್ಷಿಗೆ ನಿಪಿ -10 ಮತ್ತು 11 ನ್ನು ತೋರಿಸಿದ್ದು ಅವರು ಅದರಲ್ಲಿ ತಾನು ಇರುವುದಾಗಿ ಗುರುತಿಸಿರುತ್ತಾರೆ . ಜಮೀನಿನಲ್ಲಿ ಅಡಿಕೆ ಗಿಡ , ಮೆಕ್ಕೆ ಜೋಳ ಕಿತ್ತು ಹಾಕಿದ ವಿಚಾರದಲ್ಲಿ ಡಿ.ವೈ.ಎಸ್.ಪಿ. ಕಚೇರಿಯಲ್ಲಿ ನಿಪಿ -9 ಕ್ಕೆ ಸಾಕ್ಷಿಯಾಗಿ ನನ್ನ ಸಹಿ ಪಡೆದರು . ಸಾಕ್ಷಿ ನಿಪಿ -9 ರಲ್ಲಿನ ತನ್ನ ಸಹಿ ಗುರುತಿಸಿದ್ದು ಅದನ್ನು ನಿಪಿ -9(ಬಿ) ಎಂದು ಗುರುತಿಸಲಾಗಿದೆ . ಸಾಕ್ಷಿಗೆ ಮು.ಮಾ.- 13 ನ್ನು ತೋರಿಸಿದುಲ್ಲ ಅದರಲ್ಲಿ ಗಲಾಟೆಯವಿಡಿಯೋ ಇದ್ದು ಅದನ್ನು ನಾವು ಪೋಲೀಸರಿಗೆ ನೀಡಿದ್ದೇವು ಎಂದು ನುಡಿದಿರುತ್ತಾರೆ .

**( ಈ ಹಂತದಲ್ಲಿ ಮಾನ್ಯ ಅಭಿಯೋಜಕರ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಗಿದೆ)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

*ಓದಿ ಹೇಳಿ ಕೇಳಿ ಸರಿ ಇದೆ.*

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ

**ನ್ಯಾಯಾಧೀಶರು, ಚಿತ್ರದುರ್ಗ.**